ಸುಮಾರಿಗೆ ಅವನ ವಯಸ್ಸಿನವಳೇ ಆದ ಇದೇ ವನಿತಾ ಅಕ್ಕನ ಆಣತಿಯಂತೆ ಸಕ್ಕರೆ ಬೆರೆಸಿದ ಹಾಲು ತಂದುಕೊಟ್ಟಿದ್ದಳು, ನಾಳೆ ಮದುವಣಿಗನಾಗಲಿರುವ ಹುಡುಗನಿಗೆ. ಆಮೇಲೆ ಎರಡೆರಡು ವರ್ಷಕ್ಕೆ ಒಂದರಂತೆ ಇಬ್ಬರು ಮಕ್ಕಳು. ಹೆಂಡತಿ ಆಗೀಗ ಅಂಗಡಿಗೆ ಬಂದು ಒಂದಿಷ್ಟು ಹೊತ್ತು ಕಾಲಹರಣ ಮಾಡಿ ಹೋಗುವ ಕ್ರಮ ಇದೆ. ಕೆಲವು ಸಲ ಮಕ್ಕಳೂ ಬರುತ್ತಾರೆ. ಹಿರಿಯದು ಗಂಡು, ಕಿರಿಯದು ಹೆಣ್ಣು. ನೋಡನೋಡುತ್ತಿದ್ದಂತೆ ಅವೂ ಕೂಡಾ ಅಕ್ಕನ ಶಿಷ್ಯಂದಿರಾಗಿ, ಕಾಲ ಅದ್ಯಾವ ಮಾಯದಲ್ಲಿ ಓಡೋಡಿ ಹೋಗುತ್ತದೆ ಎಂದು ನೆನೆದರೆ ವನಿತನಿಗೆ ಬೆರಗು. ವಿಷಾದ. ತನಗೆ ಮೂವತ್ತು ವರ್ಷ ಕಳೆದುಹೋಯ್ತು. ಮದುವೆ ಮಾಡಬೇಕೆಂಬ ಯಾವ ತರಾತುರಿ ಕೂಡಾ ಅಕ್ಕನಿಗೆ ಇದ್ದಂತಿಲ್ಲ. ಮೊದಲ ಇಬ್ಬರು ತಂಗಿಯಂದಿರಿಗೆ ಮದುವೆ ಮಾಡಲು ದೊಡ್ಡಕ್ಕ ಇನ್ನಿಲ್ಲದಷ್ಟು ಚಡಪಡಿಸಿದ್ದು ವನಿತನಿಗೆ ಗೊತ್ತಿದೆ. ಇಪ್ಪತ್ತೆರಡು, ಇಪ್ಪತ್ಮೂರು ಅನ್ನುವುದರಲ್ಲಿ ಇಬ್ಬರ ಮದುವೆ ಆಗಿ ಹೋಯ್ತು. ತೀರಾ ಮಿಜಿಮಿಜಿ ಮಾಡಿರಲಿಲ್ಲ ಅಕ್ಕಂದಿರು. ತಂದೆ, ತಾಯಿ ಎರಡೂ ಆಗಿ ತಮ್ಮನ್ನು ಬೆಳೆಸಿದ ದೊಡ್ಡಕ್ಕನ ಮಾತಿಗೆ ಬೆಲೆ ಕೊಟ್ಟು ಅವಳು ಹೇಳಿದವರೆದುರು ತಲೆ ಬಾಗಿ ತಾಳಿ ಕಟ್ಟಿಸಿಕೊಂಡಿದ್ದರು. ದೊಡ್ಡ ಭಾವ ಅಕ್ಕನಿಗಿಂತಾ ಹದಿಮೂರು ವರ್ಷಗಳಷ್ಟು ಹಿರಿಯ. ಆಸ್ತಿ, ಮನೆ ಧಂಡಿಯಾಗಿದ್ದರೂ ಹಳ್ಳಿಯಲ್ಲಿ ಬೇಸಾಯ ಮಾಡಿಕೊಂಡಿದ್ದವನಿಗೆ ಮದುವೆ ಆಗದೆ ಅವನ ಭಾಗ್ಯದಲ್ಲಿ ಅಕ್ಕನ ಹೆಸರು ಬರೆದಿತ್ತು ಅಥವಾ ಅಕ್ಕನ ಭಾಗ್ಯದಲ್ಲಿ ಅವನ ಹೆಸರು. ಮೂರನೆಯವಳು ಮದುವೆಯಾಗಿದ್ದು ಒಂದು ಮಗು ಇದ್ದ ವಿಧುರನನ್ನು. ಅವಳಿಗೂ ಆಮೇಲೆ ಒಬ್ಬ ಮಗಳು ಹುಟ್ಟಿ, ತನ್ನ ಪರಿಸ್ಥಿತಿಯನ್ನು ಗೊತ್ತು ಮಾಡಿಕೊಂಡಿರುವ ಅವಳು ಗಂಡನ ಜೊತೆ ಚೆನ್ನಾಗಿಯೇ ಬಾಳ್ವೆ ಮಾಡುತ್ತಿದ್ದಾಳೆ. ಮಲಮಗನನ್ನು ಸ್ವಂತ ಮಗನಂತೆ ಜೋಪಾನ ಮಾಡುತ್ತಿದ್ದಾಳೆ. ಹೊಂದಾಣಿಕೆಯ ಮನೋಭಾವವಿದ್ದರೆ ಈ ಜಗತ್ತಿನಲ್ಲಿ ಯಾವುದು ಕಷ್ಟ? ಎಲ್ಲವೂ ಅಭ್ಯಸ್ಥವಾಗಿಬಿಡುತ್ತವೆ.

ಎಲ್ಲಾ ಸರಿ, ದೊಡ್ಡಕ್ಕ ತನ್ನ ಬಗ್ಗೆ ಯಾಕೆ ಕಠಿಣವಾಗಿದ್ದಾಳೆ ಎಂದು ಯೋಚಿಸ ಹೊರಟರೆ ಸಕಾರಣ ಅರ್ಥವಾಗುವುದಿಲ್ಲ ವನಿತನಿಗೆ. ಅವಳು ತಿರುಗಿ ನೋಡುವಷ್ಟು ಸುಂದರಿಯಲ್ಲದಿದ್ದರೂ ಕಡೆಗಣಿಸುವಂತಾ ಸಾಮಾನ್ಯರೂಪಿನವಳೂ ಅಲ್ಲ. ಏರುಪ್ರಾಯದಲ್ಲಿ ಚೆನ್ನಾಗೇ ಇದ್ದಳು ವನಿತಾ. ಈಗಿತ್ತಲಾಗಿ ವಯಸ್ಸು ಕಳೆಯುತ್ತಾ, ಮನದಲ್ಲೊಂದು ಅತಂತ್ರಭಾವ ಕಾಡುತ್ತಾ, ತಾನೂ ತನ್ನ ದೊಡ್ಡಕ್ಕನ ಥರ ಕನ್ಯಾಕುಮಾರಿಯಾಗಿ ಉಳಿದುಬಿಡುತ್ತೇನೇನೋ ಎನ್ನುವ ಎದೆಗುದಿ. ಅಕ್ಕನಿಗಾದರೆ ಹೊತ್ತು ಹೋಗಿದ್ದೇ ಗೊತ್ತಾಗದಂತೆ ಒಂದು ಉದ್ಯೋಗವಿದೆ. ಕೈ ತುಂಬುವಷ್ಟು ಬರುತ್ತದೆ ಸಂಬಳ. ಇಬ್ಬರ ಜೀವನಕ್ಕೆ ಬೇಕಾದಷ್ಟಾಯ್ತು, ಮಾತ್ರವಲ್ಲ, ಆಗೀಗ ಬರುವ ಇನ್ನಿಬ್ಬರು ಅಕ್ಕಂದಿರನ್ನು ಔತಣ, ಉಡುಗೊರೆಗಳಿಂದ ಸಂತೃಪ್ತಿಪಡಿಸಿ ಕಳಿಸಲು ದೊಡ್ಡಕ್ಕ ಕೈ ಹಿಡಿತ ಮಾಡುವುದಿಲ್ಲ. ತನ್ನ ಕರ್ತವ್ಯದ ಬಗ್ಗೆ ಅವಳಿಗೆ ವಿಪರೀತ ಎನ್ನುವಷ್ಟು ಕಾಳಜಿ. ತಂಗಿಯರಿಬ್ಬರ ಮದುವೆ ಮಾಡಿ ಕಳಿಸಿಕೊಟ್ಟ ಕೂಡಲೆ ಮುಗಿಯಿತಾ? ದೀವಳಿಗೆಯ ಅಳಿಯತನ, ಮುಂದೆ ಚೊಚ್ಚಲು ಬಾಣಂತನ, ನಾಮಕರಣ ಒಂದರ ಹಿಂದೊಂದು ಖರ್ಚಿನ ಬಾಬತ್ತುಗಳು. ಗೊಣಗದೆ ಎಲ್ಲವನ್ನೂ ಮಾಡಿ ಮುಗಿಸಿದ್ದಳು ದೊಡ್ಡಕ್ಕ. ಹೆಸರಿನಲ್ಲಿ ಮಾತ್ರಾ ಭಾಗ್ಯ ಹೊತ್ತು ತಂದವಳು. ಒಡಹುಟ್ಟಿದವರಿಗಾಗಿ ಜೀವ ತೇಯುತ್ತಿದ್ದವಳು. ಅಕ್ಕನ ಕುರಿತು ವನಿತನಿಗೆ ವಿಪರೀತದ ಗೌರವ. ಒಂದಲ್ಪ ಅಂಜಿಕೆಯೂ...

★★★

ಅಪ್ಪ ಅಮ್ಮ ತೆರೆದ ಬಾಹುಗಳಿಂದ ಸ್ವಾಗತಿಸಿದ ಚೊಚ್ಚಲು ಮಗಳು ಭಾಗ್ಯಲಕ್ಷ್ಮಿ. ಹತಾಶೆಯ ಪರಮಾವಧಿಯ ಕೊನೆಯ ಪ್ರಯತ್ನ ವನಿತಾ. ಹಿರಿಯಳಿಗೂ, ಕಿರಿಯಳಿಗೂ ಮಧ್ಯೆ ಹದಿನಾರು ವರ್ಷಗಳಷ್ಟು ವ್ಯತ್ಯಾಸ. ನಡುವೆ ಮತ್ತಿಬ್ಬರು ಹೆಣ್ಣುಮಕ್ಕಳು, ಕವಿತಾ, ಸವಿತಾ. ಸಾಲಿಗೆ ಮೂರು ಹೆಣ್ಣುಮಕ್ಕಳು ಹುಟ್ಟಿದ್ದು ಗೋವಿಂದಯ್ಯ, ಗಿರಿಜಮ್ಮ ದಂಪತಿಗೆ ಚಳಿ, ಜ್ವರ ಬಂದಂತಾಗಿದ್ದು